SA – 411

BCA (4)

# ಎರಡನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ಏಪ್ರಿಲ್/ಮೇ 2015

Repiter. (ರಿಪೀಟರ್ಸ್) (2011-12 and Onwards)

## ಕನ್ನಡ ಭಾಷಾ ಪತ್ರಿಕೆ – II

## ಸಾಹಿತ್ಯ ಸಲ್ಲಾಪ – I

Time : 3 Hours Max. Marks : 100

I. 1) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಬಳಿಕ ಸೌಗಂಧಿಕದ ಪವನನ
ಬಳಿವಿಡಿದು ನಾ ಬಂದೆನೆಮ್ಮಯ
ಲಲನೆ ಕಾಮಿಸಿದಳು ಸಹಸ್ರದಳಾಬ್ಜ ದರುಶನವ
ತಿಳಿಯಲಿದು ವೃತ್ತಾಂತ ನೀನ
ಸ್ಖಲಿತ ಬಲ ನೀನಾರು ತನ್ನನಂ
ತಿಳುಹ ಹೇಳು ಮಹಾತ್ಮ ಕಪಿ ನೀನೆನುತ ಕೈಮುಗಿದ.

2) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×3=6)

1) ಪಂಪ
2) ಗುರುಬಸಪ್ಪ
3) ಆಕಾಶಕ್ಕೆ ಎರಡು ಗೇಣು ಕಮ್ಮಿ
4) ಕೀಳ್ಗಳಿಗೆ ವೇಷವಿಲ್ಲದೆ ಗೌರವವಿಲ್ಲ.

II. 1) ಇವುಗಳಲ್ಲಿ ಐದು ಪದಗಳಿಗೆ ಮೂಲ ರೂಪ ಬರೆಯಿರಿ : (1×5=5)

ಅಯ್ಯಾವ್ರ, ಮಾರಾಯ, ಅಂದ್ಕೋಬೇಡಿ, ಡಿಫೆನ್ಸು, ಇನ್‌ಕಿಲಾಬು, ಬ್ರಿಟೀಷು, ಬ್ಯಾಸ್ರ.

2) ಇವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ : (1×5=5)

ಅಬ್ಜ, ಮೊನೆ, ಗಾಂಗೇಯ, ಉರ್ಕು, ಭುಜಂಗ, ಸೋಮ, ವಿಹಂಗ.

3) ಇವುಗಳಲ್ಲಿ ಐದು ಪದಗಳನ್ನು ಬಿಡಿಸಿ ಬರೆಯಿರಿ : (1×5=5)

ಕೆಂದಾವರೆ, ಕಣ್ಣಾಗವಲು, ಮುಮ್ಮಡಿ, ಮನಸ್ಸೆಲ್ಲಾ, ವೃಕೋದರ, ಜಲಜಾಕ್ಷಿ, ಪಾಲ್ಗಡಲು.

4) ಇವುಗಳಲ್ಲಿಯ ಉಪಮೆ, ರೂಪಕಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ : (1×5=5)

ಶರವೇಗ, ರಜತಗಿರಿ, ಚಂದ್ರಮುಖಿ, ನಕ್ಷತ್ರದಂತೆ, ಬಳ್ಳಿಯಂತೆ.

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(4×5=20)**

1) ದುರ್ಯೋಧನನು ಭೀಷ್ಮರಿಗೆ ವೀರ ಪಟ್ಟವನ್ನು ಕಟ್ಟಿದ ಸಂದರ್ಭ.
2) 'ಮೂರು ಮುಖಗಳು' ಕವಿತೆಯಲ್ಲಿ ಗಂಡು–ಹೆಣ್ಣಿನ ಸಂಬಂಧದ ಚಿತ್ರಣ.
3) ಚೆನ್ನಮ್ಮನ ಬದುಕು ದಿಕ್ಕಾಪಾಲಾಗುವುದಕ್ಕೆ ನಮ್ಮ ಸಾಮಾಜಿಕ ವ್ಯವಸ್ಥೆ ಕಾರಣವೇ ?
4) ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ತಂತ್ರಾಂಶಗಳ ಮಹತ್ವ.
5) ಶೋಷಕ ಸಮಾಜದ ಅಸ್ತ್ರಗಳಾವುವು ? 'ಕಪಿಲ' ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.
6) ಅರುಂಧತಿಯ ಪಾತ್ರ ಪರಿಚಯಿಸಿ.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : **(4×12=48)**

1) ಕುಲವನ್ನು ಕುರಿತು ದ್ರೋಣ–ಕರ್ಣರ ನಡುವೆ ನಡೆದ ವಾಗ್ವಾದವನ್ನು ವಿವರಿಸಿ.

**ಅಥವಾ**

'ದೈಹಿಕ ಬಲಕ್ಕಿಂತ – ಆತ್ಮ ಬಲ ಹೆಚ್ಚು' ಎಂಬುದನ್ನು 'ಬಾಲದ ಕದವ ತೆಗೆ' – ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

2) ದುಗ್ಗಪ್ಪಾ – ಗಿರಿಜವ್ವರ ಪಾತ್ರಗಳನ್ನು ಪರಿಚಯಿಸಿ.

**ಅಥವಾ**

ವಿನೋಬಾ ಅವರ ಮೇಲೆ ಪ್ರಭಾವ ಬೀರಿದ ಆತ್ಮ ಚರಿತ್ರೆಗಳು.

3) ದಲಿತ ಸಂಘಟಕರ ಬಗೆಗೆ ದೇವನೂರು ಮಹಾದೇವರ ನಿಲುವುಗಳೇನು ? ವಿವರಿಸಿ.

**ಅಥವಾ**

ಸಾರ್ಥಕ ಜೀವನದ ಬಗೆಗೆ ಕೆ. ಎಸ್. ನಿಸಾರ್ ಅಹಮದ್‌ರ ನಿಲುವೇನು ? ವಿವರಿಸಿ.

4) "ವಿದ್ಯೆ ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ" ! ಈ ಹೇಳಿಕೆಯನ್ನು ಕಪಿಲ ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

ಹೃದಯವಂತ ಸೋಮದತ್ತನಂತಹ ಸ್ನೇಹಿತರ ಕೊರತೆ ನಿಮ್ಮ ಸಮಾಜಕ್ಕಿದೆಯೇ ? ಚರ್ಚಿಸಿ.

---